**ಕರ್ನಾಟಕ ಸರ್ಕಾರ**
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20 :** **ದಿನಾಂಕ : 02–01–2020**

# Media Invitation

1. **Inaugural Programme of -107th Indian Science Congress**
   **Science and Technology: Rural Development**

**Inauguration:**

**Narendra Modi,**
**Prime Minister of India**

**Presence of:**

**B. S. Yediyurappa,**
**Chief Minister, Government of Karnataka**

**Dr. Harsh Vardhan**
**Minister of Science & Technology, Earth Sciences and Family Health & Welfare, Govt. of India.**

**Date: 03-01-2020, Friday, Time: 10.00 AM.**

**Venue: Main Pendal, University of Agricultural Sciences, GKVK Campus, Bengaluru**

**Special Note: Breakfast arranged at Press Club of Bengaluru, Cubbon Park by 6.45 am. The Media Person are requested to come early and have the breakfast as it is difficult to arrange for the refreshments till PM Programme is concludes.**

**Breakfast : 6.45 am to 7.20 am and Bus starts : by 7.30 am.**

**2.** ಸಿಬಿಎಸ್‌ಇ/ಐಸಿಎಸ್‌ಇ ಅಂತಾರಾಷ್ಟ್ರೀಯ ಪಠ್ಯ ಬೋಧನಾ ಕ್ರಮ ಅನುಸರಿಸುವ ಶಾಲೆಗಳು ಮತ್ತು ಕೇಂದ್ರೀಯ ವಿದ್ಯಾಲಯಗಳಲ್ಲಿ ಕನ್ನಡ  ಭಾಷಾ ಅನುಷ್ಠಾನ ಕುರಿತ ಕಾರ್ಯಾಗಾರ:

ದಿನಾಂಕ: 03-01-2020,  ಶುಕ್ರವಾರ, ಬೆಳಿಗ್ಗೆ 11-30 ಗಂಟೆಗೆ

ಸ್ಥಳ : ಮೌಂಟ್ ಕಾರ್ಮೆಲ್ ಮಹಿಳಾ ಕಾಲೇಜು ಸಭಾಂಗಣ, ವಸಂತನಗರ, ಬೆಂಗಳೂರು

3. ಚಿತ್ರಸಂತೆ ಕುರಿತು ಪತ್ರಿಕಾಗೋಷ್ಠಿ ಹಾಗೂ ಪ್ರವಾಸೋದ್ಯಮ ಇಲಾಖೆಯ

ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ :

ಸಿ.ಟಿ. ರವಿ, ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಸಕ್ಕರೆ ಸಚಿವರು

ದಿನಾಂಕ: 03-01-2020,  ಶುಕ್ರವಾರ, ಮಧ್ಯಾಹ್ನ: 1-00 ಗಂಟೆಗೆ

ಸ್ಥಳ:  ಚಿತ್ರಕಲಾ ಪರಿಷತ್, ಬೆಂಗಳೂರು

4. ಅರಣ್ಯ ಇಲಾಖೆವತಿಯಿಂದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ :

ಸಿ.ಸಿ. ಪಾಟೀಲ್, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಚಿವರು

ದಿನಾಂಕ: 03-01-2020,  ಶುಕ್ರವಾರ, ಮಧ್ಯಾಹ್ನ 3-00 ಗಂಟೆಗೆ

ಸ್ಥಳ:  ಕೊಠಡಿ ಸಂಖ್ಯೆ : 244,  2 ನೇ ಮಹಡಿ, ಅರಣ್ಯ ಸಚಿವರ ಕೊಠಡಿ, ವಿಕಾಸ ಸೌಧ, ಬೆಂಗಳೂರು

# ಪತ್ರಿಕಾ ಪ್ರಕಟಣೆ

## ಒಂದು ವರ್ಷದ ಕ್ರಾಫ್ಟ್ ಕೋರ್ಸ್ ಇನ್ ಟೈಲರಿಂಗ್ ಪರೀಕ್ಷೆ

**ಬೆಂಗಳೂರು, ಜನವರಿ 2 2020 (ಕರ್ನಾಟಕ ವಾರ್ತೆ)**

ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿವತಿಯಿಂದ ಪ್ರತಿ ವರ್ಷದಂತೆ ನಡೆಸುವ ಒಂದು ವರ್ಷದ ಕ್ರಾಫ್ಟ್ ಕೋರ್ಸ್ ಇನ್ ಟೈಲರಿಂಗ್ ಪರೀಕ್ಷೆಯನ್ನು 2020 ರ ಡಿಸೆಂಬರ್ ತಿಂಗಳಿನಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಈ ಪರೀಕ್ಷೆಗೆ ಬಾಹ್ಯ ಅಭ್ಯರ್ಥಿಯಾಗಿ ಪರೀಕ್ಷೆಗೆ ಹಾಜರಾಗಲು ಬಯಸುವ 7ನೇ ತರಗತಿ ಪಾಸಾದ ಅಥವಾ ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ಅರ್ಹತಾ ಪತ್ರವನ್ನು ಪಡೆಯುವ ಶುಲ್ಕ ಪಾವತಿ ಮಾಡಿ ಅರ್ಜಿ ಸಲ್ಲಿಸಬಹುದು.

ಅರ್ಹತಾ ಪತ್ರವನ್ನು ಶುಲ್ಕ 20ರೂ ಪಾವತಿಸಿ ಜನವರಿ 1ರಿಂದ 31 ರವರೆಗೆ ಪಡೆದುಕೊಳ್ಳಬಹುದು. ಫೆಬ್ರವರಿ 1 ರಿಂದ 28 ರವರೆಗೆ ದಂಡದೊಂದಿಗೆ (ಒಟ್ಟು ರೂ 25/-) ಪಾವತಿಸಿ ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಸರ್ಕಾರ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿದೆ ಎಂದು ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ ಪ್ರಕಟಣೆ ತಿಳಿಸಿದೆ.

## ರಸ್ತೆ ಸುರಕ್ಷತಾ ಸಪ್ತಾಹ

**ಬೆಂಗಳೂರು, ಜನವರಿ 2 2020 (ಕರ್ನಾಟಕ ವಾರ್ತೆ)**

ಇತ್ತೀಚೆಗೆ ಹೆಚ್ಚು ಸಂಭವಿಸುತ್ತಿರುವ ಅಪಘಾತವನ್ನು ಗಣನೆಗೆ ತೆಗೆದುಕೊಂಡು, ಜನರ ಪ್ರಾಣಹಾನಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಇದೇ ಜನವರಿ 11 ರಿಂದ 17 ರವರೆಗೆ 31ನೇ ರಸ್ತೆ ಸುರಕ್ಷಾ ಸಪ್ತಾಹವನ್ನು ದೇಶಾದ್ಯಂತ ಹಮ್ಮಿಕೊಂಡಿದೆ.

ಕರ್ನಾಟಕದಲ್ಲಿ ರಸ್ತೆ ಸುರಕ್ಷತಾ ಸಪ್ತಾಹವನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಸಪ್ತಾಹದಲ್ಲಿ ಟ್ರಾಫಿಕ್ ಪೊಲೀಸರು, ಸ್ವಯಂಸೇವಕರು, ವೈದ್ಯರು, ಕಾಲೇಜು ವಿದ್ಯಾರ್ಥಿಗಳು, ಸಂಘ-ಸಂಸ್ಥೆಗಳು, ಇಲಾಖೆಗಳು ಸಹ ಸಹಕರಿಸಬೇಕೆಂದು ಪ್ರಕಟಣೆ ತಿಳಿಸಿದೆ.

# ಅರ್ಜಿ ಆಹ್ವಾನ

**ಬೆಂಗಳೂರು, ಜನವರಿ 2 2020 (ಕರ್ನಾಟಕ ವಾರ್ತೆ)**

**ಚಿಕ್ಕಮಗಳೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಘಟಕದ ವಿವಿಧ ನ್ಯಾಯಾಲಯಗಳಲ್ಲಿ ಖಾಲಿ ಇರುವ ಶೀಘ್ರಲಿಪಿಗಾರರ (Stenographer) ವಿವಿಧ ವರ್ಗೀಕರಣ/ಮೀಸಲಾತಿ, ಬ್ಯಾಕ್‌ಲಾಗ್ ಸೇರಿ ಒಟ್ಟು 5 ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

**ಅರ್ಜಿಗಳನ್ನು ಚಿಕ್ಕಮಗಳೂರು ಜಿಲ್ಲಾ ನ್ಯಾಯಾಲಯ ವೆಬ್‌ಸೈಟ್ https://districts.ecourts.gov.in/chikkamagaluru-onlinerecruitment ನಲ್ಲಿ ನೀಡಲಾಗಿರುವ ಲಿಂಕ್ ಮೂಲಕ ದಿನಾಂಕ: 23-12-2019 ರಿಂದ 20-01-2020 ರ ರಾತ್ರಿ 11.59 ರವರೆಗೆ ಸಲ್ಲಿಸಬಹುದು ಎಂದು ಚಿಕ್ಕಮಗಳೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಚೇರಿ ಪ್ರಕಟಣೆ ತಿಳಿಸಿದೆ.**

**ಛಾಯಾಚಿತ್ರ ಶೀರ್ಷಿಕೆ:**

**ಸನ್ಮಾನ್ಯ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಇಂದಿನಿಂದ ಎರಡು ದಿನಗಳ ಕಾಲ ರಾಜ್ಯ ಪ್ರವಾಸದಲ್ಲಿದ್ದು ಇಂದು ಬೆಂಗಳೂರಿನ ಯಲಹಂಕ ಏರ್ ಫೋರ್ಸ್ ಬೇಸ್‌ಗೆ ಆಗಮಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವರುಗಳಾದ ಡಿ.ವಿ. ಸದಾನಂದಗೌಡ, ಪ್ರಹ್ಲಾದ ಜೋಶಿ ಮತ್ತು ಕಂದಾಯ ಸಚಿವರಾದ ಆರ್. ಅಶೋಕ್, ಅವರು ಸ್ವಾಗತಿಸಿದರು. ತದನಂತರ ಪ್ರಧಾನ ಮಂತ್ರಿಗಳು ಹೆಲಿಕ್ಯಾಪ್ಟರ್ ಮೂಲಕ ತುಮಕೂರಿಗೆ ಪ್ರಯಾಣ ಬೆಳಸಿದರು.**

## ನ್ಯಾಯಾಂಗದಲ್ಲಿ ಕನ್ನಡ
## ಪ್ರಶಸ್ತಿ ಪ್ರದಾನ ಸಮಾರಂಭ

**ಬೆಂಗಳೂರು, ಜನವರಿ 2 (ಕರ್ನಾಟಕ ವಾರ್ತೆ)**

**ನ್ಯಾಯಾಲಯಗಳಲ್ಲಿ ಕನ್ನಡ ಭಾಷೆಯನ್ನು ಬೆಳೆಸುವ ದೃಷ್ಟಿಯಿಂದ ಕನ್ನಡ ಭಾಷೆಯಲ್ಲಿ ತೀರ್ಪು ನೀಡಿದ ನ್ಯಾಯಾಧೀಶರು, ಕನ್ನಡದಲ್ಲಿ ವಾದ ಮಂಡಿಸುವ ಸರ್ಕಾರಿ ಅಭಿಯೋಜಕರು ಹಾಗೂ ವಕೀಲರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ನ್ಯಾಯಾಂಗದಲ್ಲಿ ಕನ್ನಡ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲಾಗಿದೆ.**

**ಕಾರ್ಯಕ್ರಮದಲ್ಲಿ 2017-18 ಮತ್ತು 2018-19 ನೇ ಸಾಲಿನಲ್ಲಿ 72 ಜನ ನ್ಯಾಯಾಧೀಶರು, 10 ಸರ್ಕಾರಿ ಅಭಿಯೋಜಕರು ಹಾಗೂ 20 ವಕೀಲರನ್ನು ಪುರಸ್ಕರಿಸಿ ಗೌರವಿಸಲಾಗುತ್ತಿದೆ. ಈ ಕಾರ್ಯಕ್ರಮ ರವೀಂದ್ರ ಕಲಾಕ್ಷೇತ್ರದಲ್ಲಿ ಜನವರಿ 4 ರ ಬೆಳಿಗ್ಗೆ 11-00 ಗಂಟೆಗೆ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.**